ಹೇಗೋ ಇರಬೇಕಾದವಳು ಹೀಗೆಲ್ಲ ಆಗಿದ್ದಳು.

* * *

ಶಿರಸಿ ಸಮೀಪದ ಹಳ್ಳಿಯಿಂದ ಕಾಲೇಜಿಗೆ ಓಡಾಡಿ ಬಿಎ ಡಿಗ್ರಿ ತೆಗೆದುಕೊಂಡ ಮೇಲೆ ಶಿರಸಿಯಲ್ಲೇ ಗ್ರಾನೈಟ್ ಅಂಗಡಿಯೊಂದರಲ್ಲಿ ಲೆಕ್ಕ ಪತ್ರ ನೋಡುತ್ತಿದ್ದ ಜ್ಯೋತ್ಸ್ನಾಳ ಮನೆಯಲ್ಲಿದ್ದುದು ಕಾಲೆಕರೆ ಅಡಿಕೆ ತೋಟ, ಅರ್ಧ ಎಕರೆ ಗದ್ದೆ ಮಾತ್ರ. ಬಿಎಸ್ಸಿ ಮುಗಿಸಿದ ತಮ್ಮ ಮನು ಪ್ರೈವೇಟ್ ಆಸ್ಪತ್ರೆಯಲ್ಲಿ ಲ್ಯಾಬ್ ಅಸಿಸ್ಟೆಂಟನ ಕೆಲಸ ಮಾಡುತ್ತಿದ್ದ.

ಹತ್ತಾರು ಎಕರೆಯುಳ್ಳ ತೋಟಗಾರರ ನಡುವೆ ಸಣ್ಣ ಹಿಡುವಳಿದಾರನಾದ ಅವಳ ಅಪ್ಪ ಏಗಿ ಸುಸ್ತಾಗಿದ್ದ. ಅಡಿಕೆ ತೆಂಗು ಚೆನ್ನಾಗಿ ಬೆಳೆಯುವ ಆಸ್ತಿವಂತರ ಮನೆಗೆ ಅವಳನ್ನು ದಾಟಿಸಲು ಪ್ರಯತ್ನಪಡುತ್ತಿದ್ದ. ತನ್ನ ಆಶೆಭಾಷೆಗಳೂ ಮಧ್ಯಮ ಕೆಳಸ್ತರಕ್ಕೆ ತಕ್ಕುನಾಗೇ ಇದ್ದವು ಎಂಬುದು ಜ್ಯೋತ್ಸ್ನಾಳ ಈಗಿನ ಅನಿಸಿಕೆ.

ಆದರೆ ಪವಾಡವೊಂದು ನಡೆದುಹೋಯಿತು. ಜ್ಯೋತ್ಸ್ನಾ ಕೆಲಸ ಮಾಡುತ್ತಿದ್ದ ಗ್ರಾನೈಟ್ ಅಂಗಡಿಯ ಓನರ್ ಮಗಳಿಗಾಗಿ, ಇಂಗ್ಲೆಂಡಿನಲ್ಲಿ ಇಂಜಿನಿಯರ್ ಆಗಿದ್ದ ವರನ ಸಂಬಂಧ ಬಂದಿತ್ತು. ನಿಶ್ಚಿತಾರ್ಥವೂ ಮುಗಿದು ಇನ್ನು ಮೂರು ವಾರದಲ್ಲಿ ಮದುವೆಯಾಗಬೇಕು, ಆಗ ಆ ಹುಡುಗಿ ತಿರುಪಗಡೆ ಹಾಕಿ ಕೂತಳು. ತಾನು ಈಗಾಗಲೇ ಒಬ್ಬನನ್ನು ಪ್ರೀತಿಸುತ್ತಿರುವುದಾಗಿಯೂ, ಅವನನ್ನೇ ಮದುವೆಯಾಗುವುದಾಗಿಯೂ ಹಟ ಮಾಡಿ, ನಿಶ್ಚಯವಾಗಿದ್ದ ಮದುವೆಯನ್ನು ಮುರಿದುಕೊಂಡಳು. ಹುಡುಗಿಯ ಅಪ್ಪ ಅಂದರೆ ಜ್ಯೋತ್ಸ್ನಾಳ ಗ್ರಾನೈಟ್ ಅಂಗಡಿಯ ಓನರಿಗೆ ಇಬ್ಬಂದಿ. ಅವರ ಕಣ್ಣೆದುರೇ ಕೆಲಸ ಮಾಡುತ್ತಿದ್ದ ಜ್ಯೋತ್ಸ್ನಾ ಅರ್ಹ ವಧುವಾಗಿ ಕಂಡಿರಬೇಕು. ಆ ಇಂಗ್ಲೆಂಡಿನ ಹುಡುಗನನ್ನು ಲಗ್ನವಾಗುವ ಬಗ್ಗೆ ಪ್ರಸ್ತಾಪ ಮಾಡಿದರು. ಫಾರಿನ್ನಿನಲ್ಲಿ ಸೆಟ್ಲ್ ಆದ ಹುಡುಗನ ಸಂಬಂಧವನ್ನು ಜ್ಯೋತ್ಸ್ನಾಳ ಎದುರಿಟ್ಟು 'ನನ್ನ ಮಗಳಿಗಿಂತ ನೀನು ಬೇರೆಯಲ್ಲ' ಎಂದು ಆಗೀಗ ಹೇಳುತ್ತಿದ್ದ ಮಾತಿನಂತೆ ನಡೆದುಕೊಂಡರು. ಜತೆಗೇ ತಮ್ಮ ಸರೀಕರ ನಡುವೆ ಮೂಗನ್ನೂ, ಮೀಸೆಯನ್ನೂ ಉಳಿಸಿಕೊಂಡರು. ಜ್ಯೋತ್ಸ್ನಾಳ ಅಪ್ಪನಂತೂ ಅತ್ಯಂತ ಸಂತೋಷದಲ್ಲಿ ಧಾರೆಯೆರೆದುಕೊಟ್ಟ.

ಅಂತೂ ಜ್ಯೋತ್ಸ್ನಾ ಎಂಬೋ ಅಪ್ಪಟ ಹಳ್ಳಿ ಮುಗುದೆ ಹರೀಶನೆಂಬ ಎನ್‌ಆರ್‌ಐ ಅನ್ನು ಮದುವೆಯಾಗಿ ಹೀಥ್ರೋ ವಿಮಾನ ನಿಲ್ದಾಣದ ಹತ್ತಿರವಿರುವ ಸನ್‌ಬರಿಯಲ್ಲಿ ಸಂಸಾರ ಹೂಡಿದಳು. ಕೆಂಪು ಡಬಲ್ ಡೆಕ್ಕರ್ ಬಸ್ಸುಗಳು, ಶಿಸ್ತಿನಲ್ಲಿ ಗೆರೆ ಹೊಡೆಸಿಕೊಂಡು ಮಲಗಿದ ಕಪ್ಪು ರಸ್ತೆಗಳು, ತಲೆ ಅಲ್ಲಾಡಿಸಿ ತುಟಿಯ ತಿರುವಿನಲ್ಲಿ ಮಾತ್ರ ನಗುವ ಬಿಳಿಯರು. ಇವುಗಳ ಮಧ್ಯೆ ಹೊಂದಿಕೊಳ್ಳದೇ ತನಗೇನು ಧಾಡಿ ಎಂದುಕೊಂಡೇ ಇಂಗ್ಲೆಂಡಿನಲ್ಲಿ ತಳವೂರತೊಡಗಿದಳು.

ಹೈಸ್ಟ್ರೀಟಿನಲ್ಲಿ ಅವರ ಸ್ಟುಡಿಯೊ ಅಪಾರ್ಟ್‌ಮೆಂಟ್. ಬಾಗಿಲಿಗೆ ಎದುರು ಸುಮಾರಾದ ವಿಂಡೋ. ಸಣ್ಣ ಕಿಚನ್ ಕೌಂಟರ್. ಫೋಲ್ಡಬಲ್ ಗಾಜಿನ ಗೋಡೆಯ ಆ ಬದಿಯಲ್ಲಿ ಕ್ವೀನ್‌ಸೈಝಿನ ಮಂಚ. ಗಾಜಿನ ಬಣ್ಣ ಹಸಿರಿದ್ದ ಕಾರಣವಿರಬಹುದು ಬೆಡ್ ಸರಿಯಾಗಿ ಕಾಣುತ್ತಿರಲಿಲ್ಲ ಗೋಡೆಯನ್ನು ಮಡಚಿದ ಹೊರತು. ತೋರ ಆಸಾಮಿಗಳು ಬಂದರೆ ಮೈ ಹಿಡಿಯದಂತಹ ಇಡೂವಾದ ಬಚ್ಚಲು ಒಂದು ಮೂಲೆಯಲ್ಲಿ. ಇಬ್ಬರ ಸಂಸಾರಕ್ಕೆ ಕೊರತೆಯೇನೂ ಆಗದಂಥ, ಬಿದ್ದುರುಳಿ ಸಂಭ್ರಮಿಸಲು ಜಾಗವೂ ಇಲ್ಲದಂಥ ಮನೆ ಅದು.

ಹರೀಶ ಅಂತರ್ಮುಖಿ. ಶುರುವಿನಲ್ಲಿ ಹಿಂಜರಿಕೆಯಿಂದ ಜ್ಯೋತ್ಸ್ನಾ ಜಾಸ್ತಿ ಮಾತನಾಡಲಿಲ್ಲ. ಅವ ಆಫೀಸಿನಿಂದ ಮನೆಗೆ ಬರುವಾಗ ಎಂಟು ಮೀರಿರುತ್ತಿತ್ತು. ಮಾಡಿಟ್ಟ ಅಡುಗೆಯನ್ನು ಕೋಳಿ ಹೆಕ್ಕಿದಂತೆ ತಿನ್ನುತ್ತಿದ್ದ. ಪ್ರತಿಯೊಂದರ ಹದ ಹಿಡಿಯುವುದಕ್ಕೆ ತಿಂಗಳೇ ಬೇಕಾಯಿತು. ರಾತ್ರಿ ಎಲ್ಲ ಯಾಂತ್ರಿಕ. ಬಟ್ಟೆ ಬಿಚ್ಚಲು ಮಾತ್ರ ಸಿಗುವ ಸ್ವಲ್ಪ ಸಹಾಯ ಬಿಟ್ಟರೆ ಬಾಕಿ ಎಲ್ಲವೂ ಕತ್ತಲಿನಲ್ಲಿ ಗುಂಡು ಹೊಡೆದಂತೆ. ಕ್ರಮೇಣ ಅವಳಿಗೆ ಗೊತ್ತಾಗುತ್ತ ಹೋದದ್ದು ಹರೀಶನ ಮುಂಗೋಪ, ಮುಖಕ್ಕೆ ಹೊಡೆದಂತೆ ಆಡುವ ಮಾತುಗಳು, ಸ್ವಚ್ಛತೆಯ ಗೀಳು ಇತ್ಯಾದಿ. ಎಲ್ಲವೂ ಒಂದಕ್ಕೆ ಇನ್ನೊಂದು ಫ್ರೀ ಆಫರ್‌ನಲ್ಲಿ ಬಂದಂತೆ. ಏಕಾಂತದ ಸಲಿಗೆಯಲ್ಲೂ ಅವಳು ಮೈಮರೆಯುವಹಾಗಿಲ್ಲ.

ಒಂದು ರಾತ್ರಿ ಆಗಿದ್ದು ಹೀಗೆ. ಎಲ್ಲ ಮುಗಿದು ಹರೀಶ ಇನ್ನೇನು ಬಾತ್ರೂಮಿನೊಳಗೆ ಹೋಗುತ್ತಿದ್ದ. ಅಷ್ಟೊತ್ತಿಗೆ ಸಿಂಕಿನ ಕೆಳಗೆ ಸುರುಳಿಸುತ್ತಿ ಬಿದ್ದಿದ್ದ ಸ್ಯಾನಿಟರಿಪ್ಯಾಡ್ ಅವನ ಕಣ್ಣಿಗೆ ಬಿತ್ತು. 'ಗಲೀಜು' ಎಂದು ಗೊಣಗಿ